ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರಧಾನ ಅಭಿಯಂತರರು ರವರ ಕಛೇರಿ, ಪಾಲಿಕೆಯ ಕೇಂದ್ರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು–560002.

ಸಂಖ್ಯೆ:ಬಿಬಿಎಂಪಿ/ಪ್ರಅ/ತಾ.ಮಂ/51/2021-22 ದಿನಾಂಕ:17/01/2022

: ತಾಂತ್ರಿಕ ಮಂಜೂರಾತಿ ಪತ್ರ :

ವಿಷಯ : Annual Maintenance and repairs of street lights in Ward No.05 Package Y-05 of Yalahanka Zone ಕಾಮಗಾರಿಗೆ ತಾಂತ್ರಿಕ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ :
1. ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಅಧಿಕಾರ ಚಲಾಯಿಸಿ ಮಾನ್ಯ ಆಡಳಿತಗಾರರು ರವರ ನಡವಳಿಗಳ ವಿಷಯದ ಸಂಖ್ಯೆ:339/2021–22 ದಿನಾಂಕ:04–11–2021
2. ಮಾನ್ಯ ಮುಖ್ಯ ಆಯುಕ್ತರು ರವರು ಕಾಮಗಾರಿಗಳ ಪಟ್ಟಿಗೆ ಅನುಮೋದನೆ ನೀಡಿರುವ ಕಛೇರಿ ಸಂಖ್ಯೆ:ಪಿಎಸ್(ಜಿ)/3874/2021–22, ದಿನಾಂಕ:28–12–2021.

--*-*-*-*

ಪ್ರಸ್ತಾವನೆ : ಕಾರ್ಯಪಾಲಕ ಅಭಿಯಂತರರು (ವಿದ್ಯುತ್–ಯಲಹಂಕ) ರವರು Annual Maintenance and repairs of street lights in Ward No.05 Package Y-05 of Yalahanka Zone ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ.73.71 (ಎಪ್ಪತ್ತಮೂರು ಲಕ್ಷ ಎಪ್ಪತ್ತೊಂದು ಸಾವಿರ ರೂಗಳು ಮಾತ್ರ) ಲಕ್ಷಗಳ ಮೊತ್ತಕ್ಕೆ ತಯಾರಿಸಿ, ಉಲ್ಲೇಖ(1)ರ ನಡವಳಿಯ ವಲಯವಾರು ಕ್ರಿಯಾಯೋಜನೆಯ ಅನಮೋದನೆಯಂತೆ ಹಾಗೂ ಉಲ್ಲೇಖ(2)ರ ಮಾನ್ಯ ಮುಖ್ಯ ಆಯುಕ್ತರು ರವರು ಕಾಮಗಾರಿಗಳ ಪಟ್ಟಿಗೆ ಅನುಮೋದನೆ ನೀಡಿ, ಜಾಬ್ ಸಂಖ್ಯೆ, ಹಾಗೂ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಲು ಕ್ರಮವಹಿಸುವಂತೆ ಸೂಚಿಸಿರುವ ಮೇರೆಗೆ ಕಾರ್ಯಪಾಲಕ ಅಭಿಯಂತರರು (ವಿದ್ಯುತ್–ಯಲಹಂಕ) ಮತ್ತು ಅಧೀಕ್ಷಕ ಅಭಿಯಂತರರು (ವಿದ್ಯುತ್) ರವರು ತಾಂತ್ರಿಕ ಮಂಜೂರಾತಿಯನ್ನು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುವಂತೆ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಪ್ರಅ/ತಾ.ಮಂ/51/2021–22, ದಿನಾಂಕ : 17/01/2022

Annual Maintenance and repairs of street lights in Ward No.05 Package Y-05 of Yalahanka Zone ಕಾಮಗಾರಿಯ ರೂ.73.71 (ಎಪ್ಪತ್ತಮೂರು ಲಕ್ಷ ಎಪ್ಪತ್ತೊಂದು ಸಾವಿರ ರೂಗಳು ಮಾತ್ರ) ಲಕ್ಷಗಳ ಮೊತ್ತಕ್ಕೆ ಅವಶ್ಯವಿರುವ ಜಾಬ್ ಸಂಖ್ಯೆ, ಹಾಗೂ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ, ಸದರಿ ಅಂದಾಜು ಪಟ್ಟಿಗೆ ಈ ಕಛೇರಿಯ ತಾಂತ್ರಿಕ ಮಂಜೂರಾತಿ ವಹಿಯ ಕ್ರಮ ಸಂಖ್ಯೆ 51 ಮತ್ತು ಪುಟ ಸಂಖ್ಯೆ 15 ರಲ್ಲಿ ನೊಂದಾಯಿಸಿ ರೂ.73.71 ಲಕ್ಷಗಳಿಗೆ ಈ ಕೆಳಕಂಡ ನಿಬಂಧನೆ/ಷರತ್ತುಗಳನ್ನು ಕಾರ್ಯಪಾಲಕ ಅಭಿಯಂತರರು (ವಿದ್ಯುತ್–ಯಲಹಂಕ) ರವರು ಕಡ್ಡಾಯವಾಗಿ ಪಾಲಿಸುವ ಷರತ್ತಿಗೆ ಒಳಪಡಿಸಿ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆ.

ಷರತ್ತು ಮತ್ತು ತಾಂತ್ರಿಕ ನಿಬಂಧನೆಗಳು :

1. ಮಾನ್ಯ ಆಯುಕ್ತರವರ ಕಛೇರಿ ಸುತ್ತೋಲೆ ಸಂಖ್ಯೆ: ಆಯುಕ್ತರು/ಪಿಆರ್/176/15–16 ದಿನಾಂಕ:22.12.2015 ರ ಅದೇಶದ ಮೇರೆಗೆ ಸದರಿ ಕಾಮಗಾರಿಯನ್ನು ಇನ್ಯಾವುದೆ ಅನುದಾನದ ಯೋಜನೆಯಲ್ಲಿ ಕೈಗೆತ್ತಿಗೊಂಡಿರುವುದಿಲ್ಲವೆಂದು ಅಥವಾ ಕಾಮಗಾರಿಗಳು ಪುನಾರವರ್ತಿತವಾಗಿಲ್ಲವೆಂದು ಹಾಗೂ ಈಗಾಗಲೇ ಚಾಲ್ತಿಯಲ್ಲಿರುವ / ಪೂರ್ಣಗೊಂಡಿರುವ ಕಾಮಗಾರಿಗಳು ಅಥವಾ ಲೋಕಾಯುಕ್ತ / ಯಾವುದೇ ಇಲಾಖಾ ವಿಚಾರಣೆ ಹಂತದಲ್ಲಿರುವ ಕಾಮಗಾರಿಗಳು ಸದರಿ ಕ್ರಿಯಾ ಯೋಜನೆಯಲ್ಲಿ ಸೇರ್ಪಡೆಯಾಗಿರುವುದಿಲ್ಲವೆಂದು ಅಥವಾ ಪುನರಾವರ್ತಿತವಾಗಿಲ್ಲವೆಂದು, ಕಾಮಗಾರಿ ಪ್ರಾರಂಭವಾಗುವ ಪೂರ್ವದಲ್ಲೇ ಸಂಬಂಧಪಟ್ಟ ಕಾ.ಪಾ.ಅ/ಸ.ಕಾ.ಪಾ.ಅ/ಸಹಾಯಕ/ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ದೃಢೀಕರಿಸಿ, ಖಚಿತಪಡಿಸಿಕೊಂಡ ನಂತರವಷ್ಟೆ ಸದರಿ ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಷರತ್ತಿಗೊಳಪಡಿಸಿದೆ.
2. ಅಂದಾಜಿನ ಪರಿಮಾಣಗಳನ್ನು ಮತ್ತು ದರಗಳನ್ನು ಮತ್ತೊಮ್ಮೆ ಪರಿಶೀಲಿಸಿಕೊಳ್ಳತಕ್ಕದ್ದು.
3. ನಿಗಧಿಯಾದ ದರಪಟ್ಟಿಯಲ್ಲಿಲ್ಲದ ಹಂಗಾಮಿ ದರಗಳ ಬಗ್ಗೆ ಮೂಲಾಧಾರಿತ ದರಗಳಿಗೆ (Data Rate) ಮತ್ತು ದರಗಳ ವಿವರಗಳಿಗೆ (Rate Analysis) ದರಪಟ್ಟಿಗಳನ್ನು ಕಾಮಗಾರಿ ಆರಂಭಿಸುವ ಮುಂಚೆಯೇ ಸಕ್ಷಮ ಪ್ರಾಧಿಕಾರ ರವರಿಂದ ಒಪ್ಪಿಗೆ ಪಡೆಯುವುದು

17

4. ಅಂದಾಜು ಪಟ್ಟಿಯಲ್ಲಿ ಅಳವಡಿಸಿರುವ ಇಡಗಂಟು ರೂಪದಲ್ಲಿ ಒದಗಿಸಲಾಗಿರುವ (Lumpsum Provisions) ಮೊತ್ತಗಳಿಗೆ ವಿವರವಾದ ಉಪ ಅಂದಾಜುಗಳನ್ನು ಸಿದ್ಧಗೊಳಿಸಿ ಕೆಲಸ ಆರಂಭಿಸುವ ಮುನ್ನ ನಿಯಮಾನುಸಾರ ಸೂಕ್ತ ಒಪ್ಪಿಗೆ ಪಡೆಯತಕ್ಕದ್ದು.
5. ಪ್ರಸ್ತಾಪಿಸಿರುವ ರಸ್ತೆಗಳು, ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿರುವುದರ ಬಗ್ಗೆ ಕಡ್ಡಾಯವಾಗಿ ಖಾತ್ರಿ ಪಡಿಸಿಕೊಂಡ ನಂತರವಷ್ಟೇ ಕಾಮಗಾರಿಯನ್ನು ಅನುಷ್ಠಾನಗೊಳಿಸುವುದು.
6. ಕಾಮಗಾರಿಯನ್ನು ನಿಗಧಿತ ವಿಶಿಷ್ಠ ವಿವರಣೆಯ (Standard Specification) ಪ್ರಕಾರ ನಿರ್ವಹಿಸತಕ್ಕದ್ದು.
7. ಅಂದಾಜುಪಟ್ಟಿಯ ಮೊತ್ತವು ಮಂಜೂರಾತಿಯಾದ ಮೊತ್ತಕ್ಕಿಂತ ಮೀರಬಾರದು, ಹಾಗೂ ಕಾಮಗಾರಿಗೆ ಮಂಜೂರಾದ ಮೊತ್ತದ ಹಣವನ್ನು ಅದೇ ಕಾಮಗಾರಿಗೆ ಉಪಯೋಗಿಸತಕ್ಕದ್ದು.
8. ತೆರವುಗೊಳಿಸಿರುವ ಉಪಯುಕ್ತ ಸಾಮಾಗ್ರಿಗಳ ಬಗ್ಗೆ MAS ನ ವಹಿಯಲ್ಲಿ ದಾಖಲಿಸುವುದು ಹಾಗೂ ಈ ತರಹದ ಉಪಯುಕ್ತ ಸಾಮಾಗ್ರಿಗಳನ್ನು ಬೇರೆಡೆ ಉಪಯೋಗಿಸಿರುವ (ಮರು ಬಳಕೆ ಮಾಡಿರುವ) ಬಗ್ಗೆ ಪ್ರತ್ಯೇಕ ವಹಿಯಲ್ಲಿ ದಾಖಲಿಸಿ ದೃಢೀಕರಿಸಿಕೊಳ್ಳುವುದು.
9. ರೂ. 1.00 ಲಕ್ಷಗಳಿಗಿಂತ ಮೇಲ್ಪಟ್ಟ ಎಲ್ಲಾ ಕಾಮಗಾರಿಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಕೈಗೊಳ್ಳುವುದು.
10. ಕರ್ನಾಟಕ ಸರ್ಕಾರ ಆದೇಶ ಸಂಖ್ಯೆ:ಆಇ/876(ಪಿ-1)/ವೆಚ್ಚ-12/17, ದಿನಾಂಕ:12/10/2017ರಂತೆ ಕಡ್ಡಾಯವಾಗಿ ರೂ.50.00 ಲಕ್ಷಗಳನ್ನು ಮೀರದ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸುವ ಸಮಯದಲ್ಲಿ Randomization ಮೂಲಕ ಕಾಮಗಾರಿಗಳ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದವರಿಗೆ ಮೀಸಲಿಡುವ ಸಂಬಂಧ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವುದು.
11. ಸದರಿ ಕಾಮಗಾರಿಗೆ ಟೆಂಡರ್ ಅಹ್ವಾನಿಸುವಾಗ Stander Tender Document KW1/2/3/4 ಹಾಗೂ ಆಗಿಂದಾಗ್ಗೆ ಹೊರಡಿಸಿರುವ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಟೆಂಡರ್ ಅಹ್ವಾನಿಸತಕ್ಕದ್ದು.
12. ಮಂಜೂರಾದ ಕಾಮಗಾರಿಯಲ್ಲಿ ಯಾವುದೇ ಬದಲಾವಣೆ ಅಥವಾ ಮಾರ್ಪಾಡು ಆಗಿದ್ದಲ್ಲಿ ಅನುಷ್ಠಾನ ಅಧಿಕಾರಗಳೇ ಜವಾಬ್ದಾರರಾಗಿರುತ್ತಾರೆ.
13. ನಿಗದಿತ ಅವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸುವುದು. ಸಾಧ್ಯವಾಗದ ಪಕ್ಷದಲ್ಲಿ ಕಾಲಾವಧಿ ವಿಸ್ತರಣೆಯನ್ನು ಸೂಕ್ತ ಸಮಜಾಯಿಷಿಯೊಂದಿಗೆ/ವಿವರವಾದ ಸಮಂಜಸ ವರದಿ ನೀಡಿ ಕಾಲಾವಧಿ ವಿಸ್ತರಣೆ ಪಡೆಯುವುದು.
14. ಸದರಿ ಕಾಮಗಾರಿಯನ್ನು ನಿರ್ವಹಿಸುವಾಗ ಅಂದಾಜಿನಲ್ಲಿ ವಿಶಿಷ್ಠ ವಿವರಣೆಯಂತೆ ನಿರ್ವಹಿಸುವುದು ಹಾಗೂ ಬಿಲ್ಲನ್ನು ಸಲ್ಲಿಸುವಾಗ ಕಡ್ಡಾಯವಾಗಿ ಗುಣನಿಯಂತ್ರಣ ವಿಭಾಗದ ವರದಿಯೊಂದಿಗೆ ಸಲ್ಲಿಸುವುದು.
15. ಮೇಲಾಧಿಕಾರಿಗಳಿಗೆ ಮಾಹಿತಿ ಒದಗಿಸುವಲ್ಲಿ ಮರೆಮಾಚಿದಲ್ಲಿ ಹಾಗೂ ಅಂದಾಜು ಪಟ್ಟಿ ತಯಾರಿಸುವಲ್ಲಿ ಯಾವುದಾದರೂ ಲೋಪದೋಷಗಳು ಕಂಡು ಬಂದಲ್ಲಿ ಸಂಬಂಧಪಟ್ಟ ಕಿರಿಯ / ಸಹಾಯಕ ಅಭಿಯಂತರರು (ವಿ) / ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ) / ಕಾರ್ಯಪಾಲಕ ಅಭಿಯಂತರರು (ವಿ) ರವರನ್ನು ನೇರ ಜವಾಬ್ದಾರರನ್ನಾಗಿ ಮಾಡಲಾಗುವುದು.
16. ಕಾಮಗಾರಿಯ ಗುಣಮಟ್ಟವನ್ನು ಕಾಯ್ದಿರಿಸುವ ಬಗ್ಗೆ ಸಂಬಂಧಪಟ್ಟ ಕಿರಿಯ / ಸಹಾಯಕ ಅಭಿಯಂತರರು (ವಿ) / ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ) / ಕಾರ್ಯಪಾಲಕ ಅಭಿಯಂತರರು (ವಿ) ರವರನ್ನು ನೇರ ಜವಾಬ್ದಾರರನ್ನಾಗಿ ಮಾಡಲಾಗುವುದು.
17. ಅಂದಾಜು ಪಟ್ಟಿಯಲ್ಲಿ ಪ್ರಾವಧಾನ ಮಾಡಿರುವ ಐಟಂಗಳ ಮತ್ತು ಅಳವಡಿಸಿರುವ ದರಗಳ ಬಗ್ಗೆ ಕಡತದ ಟಿಪ್ಪಣಿ ಹಾಳೆ ಪುಟ ಸಂಖ್ಯೆ: 29 ರಲ್ಲಿ ಸಂಬಂಧಿಸಿದ ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಮತ್ತು ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರು ಸಹಿಯೊಂದಿಗೆ ಸಲ್ಲಿಸಿರುವ ವರದಿಯ ಮೇರೆಗೆ ಹಾಗೂ ಟಿಪ್ಪಣಿ ಹಾಳೆಯ ಪುಟ ಸಂಖ್ಯೆ: 30 ರಲ್ಲಿನ ಕಂಡಿಕೆ (67) ರಲ್ಲಿನ ಅಂಶಗಳಿಗೆ ಸಂಬಂದಪಟ್ಟ ಕಾರ್ಯಪಾಲಕ ಅಭಿಯಂತರರು ರವರು ಧೃಢೀಕರಿಸಿಕೊಳ್ಳುವ ಷರತ್ತಿಗೊಳಪಟ್ಟು ತಾಂತ್ರಿಕ ಮಂಜೂರಾತಿಯನ್ನು ಪರಿಗಣಿಸಲಾಗಿದೆ.

17/1/22

ಪ್ರಧಾನ ಅಭಿಯಂತರರು

ಪ್ರತಿಯನ್ನು:

1. ಅಧೀಕ್ಷಕ ಅಭಿಯಂತರರು (ವಿದ್ಯುತ್), ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
2. ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ಯಲಹಂಕ) ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.